**ಓ.ಎಸ್ ನಂಃ 118/2018**

**ಪಿ.ಡಬ್ಲು-1**

ಸಾಕ್ಷಿಯನ್ನು ದಿನಾಂಕಃ15.04.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲು ಃ- ಪ್ರತಿವಾದಿಗಳ ಪರ ಶ್ರೀಮತಿ. ಎನ್ ಪಿ ವಕೀಲರಿಂದಃ**

ನಾನು ಎಂ.ಎಸ್.ಸಿ ವರಗೆ ಓದಿರುತ್ತೇನೆ. ನಿಪಿ 1 ನ್ನು ಖಾತೆ ಬದಲಾವಣೆ ಮಾಡಿಕೊಳ್ಳುವ ಉದ್ದೇಶದಿಂದ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಗೆ ದಾವಾ ಆಸ್ತಿಯ ಸರ್ವೆ ನಂ. 12/16 ರ 1971-1972 ರಿಂದ 1975-76 ರ ಪಹಣಿ ದೃಢೀಕೃತ ನಕಲನ್ನು ತೋರಿಸಲಾಗಿ ಅದರಲ್ಲಿ ಬಂಗಿ ಮುನೇಪ್ಪ ರವರು ಹೆಸರು ಇರುವುದಾಗಿ ಒಪ್ಪಿಕೊಂಡ ಕಾರಣ ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ಸಾಕ್ಷಿಗೆ ದಾವಾ ಆಸ್ತಿಯ ಸರ್ವೆ ನಂ. 12/16 ರ 1976-1977 ರಿಂದ 1983-84 ರ ಪಹಣಿ ದೃಢೀಕೃತ ನಕಲನ್ನು ತೋರಿಸಲಾಗಿ ಅದರಲ್ಲಿ ಬಂಗಿ ಮುನೆಪ್ಪ ರವರು ಹೆಸರು ಇರುವುದಾಗಿ ಒಪ್ಪಿಕೊಂಡ ಕಾರಣ ಅದನ್ನು ನಿಡಿ 2 ಎಂದು ಗುರುತಿಸಲಾಯಿತು. ನಿಪಿ 1 ರದಲ್ಲಿ ತೋರಿಸಿರುವ ದಾವಾ ಆಸ್ತಿಯ ಚೆಕ್ಕು ಬಂದಿ ತಪ್ಪು ಎಂದರೆ ಸರಿಯಲ್ಲ. ದಾವಾ ಆಸ್ತಿ ಹಾಗೂ ಇತರೆ ಆಸ್ತಿಗಳ ಮೇಲೆ ಎಲ್.ಆರ್.ಎಫ್ ಪ್ರಕರಣ ಇದ್ದು ಅದು ಈಗಲು ಚಾಲ್ತಿಯಲ್ಲಿ ಇದೆ ಎಂದರೆ ಸರಿಯಲ್ಲ. ಆಗಾಗೀ ಹಳೆ ದಾಖಲೆ ನೀಡದೇ ಕೇವಲ ನಿಪಿ 1 ನ್ನು ಮಾತ್ರ ಹಾಜರುಪಡಿಸಿರುತ್ತೇನೆ ಎಂದರೆ ನನಗೆ ದಾವಾ ಆಸ್ತಿ ಬಂದಾಗನಿಂದ ದಾಖಲೆ ಹಾಜರುಪಡಿಸಿರುತ್ತೇನೆ. ರಾಮಪ್ಪ ಹಾಗೂ ಆತನ ಮಗ ಮುನಿರತ್ನಪ್ಪ ತೀರಿಕೊಂಡಿದ್ದು ಅವರ ಕುಟುಂಬದವರೇ ದಾವಾ ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸ್ವಾಧೀನ ಇಲ್ಲದ ಕಾರಣ ಸ್ವಾಧೀನ ಪಡೆಯಲು ಈ ದಾವೆ ಹಾಕಿರುತ್ತೀರಾ ಎಂದರೆ ಸರಿಯಲ್ಲ. ನೀವು ಆಗಲೀ ನಿಮ್ಮ ತಂದೆ ಆಗಲೀ ದಾವಾ ಆಸ್ತಿ ಸ್ವಾಧೀನದಲ್ಲಿ ಇಲ್ಲ ಹಾಗೂ ಆ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಬಂಗಿ ಮುನಿಯಪ್ಪ ನವರ ಹೆಸರಿನಲ್ಲಿರುವ ಆಸ್ತಿಯನ್ನು ಹೊಡೆಯಲು ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)***

**ಓದಿ ಹೇಳಿ ಕೇಳಿ ಸರಿ ಇದೆ,**

**ಸಹಿ/-**

**(ಹರೀಶ್. ಜಿ )**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**

**ಮತ್ತು ಜೆಎಂಎಫ್ ಸಿ, ಮುಳಬಾಗಿಲು**